# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 316**

**ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 13.08.2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2022-23ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ಜಿಲ್ಲೆಗೊಂದರಂತೆ 35 ಹೊಸ ಗೋಶಾಲೆ ನಿರ್ಮಿಸಲು ಘೋಷಣೆ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ; | ಬಂದಿದೆ.<br><br>2022-23ನೇ ಸಾಲಿನ ಆಯವ್ಯಯದಲ್ಲಿ 30 ಗೋಶಾಲೆಗಳಿಂದ 100 ಗೋಶಾಲೆಗಳಿಗೆ ಹೆಚ್ಚಿಸುವುದಾಗಿ ಘೋಷಿಸಲಾಗಿದೆ. |
| ಆ) | ಈ ಉದ್ದೇಶಕ್ಕೆ ಮೀಸಲಿಟ್ಟಿದ್ದ ಅನುದಾನ ಎಷ್ಟು; ಈವರೆಗೆ ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನ ಎಷ್ಟು; ಈವರಗೆ ಎಷ್ಟು ಗೋಶಾಲೆಗಳನ್ನು ನಿರ್ಮಿಸಲಾಗಿದೆ; (ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡಿರುವ ಗೋಶಾಲೆಗಳ ವಿವರವನ್ನು ಜಿಲ್ಲಾವಾರು ಒದಗಿಸುವುದು) | ಈ ಉದ್ದೇಶಕ್ಕೆ ಮೀಸಲಿಟ್ಟ, ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ.<br><br>**(ರೂ.ಲಕ್ಷಗಳಲ್ಲಿ)**<br><br>**ವರ್ಷ** / **ನಿಗಧಿ** / **ಬಿಡುಗಡೆ** / **ವೆಚ್ಚ**<br>2022-23 / ರೂ.3500.00 / ರೂ.3500.00 / ರೂ.3500.00<br><br>30 ಜಿಲ್ಲೆಗಳಲ್ಲಿ (ಬಳ್ಳಾರಿ ಜಿಲ್ಲೆ ಹೊರತುಪಡಿಸಿ) ಸರ್ಕಾರಿ ಗೋಶಾಲೆಗಳು ನಿರ್ಮಾಣಗೊಂಡು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿ 14 ಸರ್ಕಾರಿ ಗೋಶಾಲೆಗಳ ಕಾಮಗಾರಿ ಪ್ರಗತಿಯಲ್ಲಿವೆ.<br><br>**(ವಿವರ ಅನುಬಂಧ-1ರಲ್ಲಿ ನೀಡಲಾಗಿದೆ)** |
| ಇ) | ಪ್ರತಿ ಜಿಲ್ಲೆಯಲ್ಲಿ ಹೊಸ ಗೋಶಾಲೆ ನಿರ್ಮಿಸುವ ಕುರಿತು ಸರ್ಕಾರದ ನಿಲುವೇನು; | |

ಈ) ಕಳೆದ 2 ವರ್ಷದಿಂದ ರಾಜ್ಯದಲ್ಲಿ, ಅಕ್ರಮವಾಗಿ ಕಸಾಯಿಖಾನೆ ನಡೆಸುತ್ತಿರುವ ಕುರಿತು ದಾಖಾಲಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) ಕಸಾಯಿಖಾನೆ ನಡೆಸುತ್ತಿರುವವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು?

ಕಳೆದ 03 ವರ್ಷದಿಂದ ರಾಜ್ಯದಲ್ಲಿ ಅಕ್ರಮವಾಗಿ ಕಸಾಯಿಖಾನೆ ನಡೆಸುತ್ತಿರುವ ಕುರಿತು ದಾಖಲಾದ ಪ್ರಕರಣಗಳ ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿ ಈ ಕೆಳಗಿನಂತಿದೆ.

| ಕ್ರ.ಸಂ. | ಘಟಕ | ವರ್ಷ | | |
|---|---|---|---|---|
| | | **2023** | **2024** | **2025** |
| 1 | ಬೆಂಗಳೂರು ನಗರ | 5 | 1 | 2 |
| 2 | ಮಂಗಳೂರು ನಗರ | 0 | 2 | 0 |
| 3 | ಬೆಂಗಳೂರು ಜಿಲ್ಲೆ | 0 | 0 | 1 |
| 4 | ತುಮಕೂರು ಜಿಲ್ಲೆ | 38 | 9 | 1 |
| 5 | ಬೆಂಗಳೂರು ದಕ್ಷಿಣ ಜಿಲ್ಲೆ | 4 | 1 | 0 |
| 6 | ಚಾಮರಾಜನಗರ ಜಿಲ್ಲೆ | 1 | 5 | 0 |
| 7 | ಹಾಸನ ಜಿಲ್ಲೆ | 3 | 6 | 1 |
| 8 | ಚಿತ್ರದುರ್ಗ ಜಿಲ್ಲೆ | 3 | 3 | 1 |
| 9 | ಬೆಳಗಾವಿ ಜಿಲ್ಲೆ | 0 | 1 | 0 |
| 10 | ವಿಜಯಪುರ ಜಿಲ್ಲೆ | 1 | 2 | 0 |
| | **ಒಟ್ಟು** | **55** | **30** | **6** |

ಕಸಾಯಿಖಾನೆ ನಡೆಸುತ್ತಿರುವವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

1) ಕೇಂದ್ರ ಸರ್ಕಾರದ The prevention of Cruelty to Animals (Slaughter House Rules), 2001" ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಸಾಯಿಖಾನೆ ನಿರ್ವಹಣೆಗೆ ಅನುಸರಿಸಬೇಕಾದ ಮಾರ್ಗಸೂಚಿಯನ್ನು **ಅನುಬಂಧ-2** ರಲ್ಲಿ ಇರಿಸಲಾಗಿದೆ.
2) ರಾಜ್ಯದಲ್ಲಿ ಅನಧಿಕೃತ ಕಸಾಯಿಖಾನೆಗಳ ನಿಯಂತ್ರಣಕ್ಕೆ ಕರ್ನಾಟಕ ನಗರ ಪಾಲಿಕೆಗಳು ಅಧಿನಿಯಮ, 1976 ಮತ್ತು ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ಅನ್ವಯಿಸಲಿದೆ. ಈ ಅಧಿನಿಯಮಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಕಸಾಯಿಖಾನೆಗಳ ನಿಯಂತ್ರಣ ಮತ್ತು ನಿಯಮಿತ ಕಾರ್ಯಾಚರಣೆಯನ್ನು ಖಚಿತಪಡಿಸುವ ಅಧಿಕಾರವನ್ನು ನೀಡಿದೆ.
3) ನಗರ ಸ್ಥಳೀಯ ಸಂಸ್ಥೆಗಳು ಕಸಾಯಿಖಾನೆಗಳಿಗೆ ಪರವಾನಗಿ ನೀಡುವ ಸಂದರ್ಭದಲ್ಲಿ ಸ್ವಚ್ಛತೆ ಕಾಪಾಡಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆಯನ್ನು ಮಾಡುವ ಷರತ್ತು ವಿಧಿಸಲಾಗಿರುತ್ತದೆ. ಅನಧಿಕೃತ ಅಥವಾ ಪರವಾನಗಿ ಇಲ್ಲದ ಕಸಾಯಿಖಾನೆಗಳಿಗೆ ನೋಟಿಸ್ ನೀಡಿ ಮುಚ್ಚಲು ಕ್ರಮವಹಿಸಲಾಗುತ್ತಿದೆ.
4) ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಸಾಯಿಖಾನೆಗಳ ಇರುವಿಕೆಯ ಬಗ್ಗೆ

| | | |
|---|---|---|
| | | ಮಾಹಿತಿಯನ್ನು ತಿಳಿಯುವಂತೆ ಗುಪ್ತವಿಭಾಗದ ಸಿಬ್ಬಂದಿಯವರಿಗೆ ಮತ್ತು ಬೀಟ್ ಸಿಬ್ಬಂದಿಗಳಿಗೆ ಆಗಾಗ್ಗೆ ಸೂಚನೆಗಳನ್ನು ನೀಡಲಾಗುತ್ತಿದೆ.<br>5) ಕಸಾಯಿಖಾನೆಗಳ ಇರುವಿಕೆಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.<br>6) ಅನಧಿಕೃತ ಕಸಾಯಿಖಾನೆಗಳು ಕಂಡುಬಂದಲ್ಲಿ ಸಂಬಂಧಿಸಿದ ಇಲಾಖೆಯ ಸಮನ್ವಯತೆಯೊಂದಿಗೆ ಕ್ರಮವಹಿಸಲಾಗುತ್ತದೆ.<br>7) ಅಕ್ರಮ ಕಸಾಯಿಖಾನೆ ನಡೆಸುತ್ತಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುತ್ತಿದೆ.<br>8) ಆರೋಪಿಗಳ ಮೇಲೆ ದೋಷಾರೋಪಣಾ ಪತ್ರವನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ.<br>9) ಗೋಹತ್ಯೆ ನಿಷೇಧ ಕಾನೂನು ಸಮರ್ಪಕವಾಗಿ ಜಾರಿಯಲ್ಲಿದ್ದು, ಕಾನೂನು ಉಲ್ಲಂಘನೆ ಮಾಡುವ ವ್ಯಕ್ತಿಗಳ ಮೇಲೆ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿದೆ.<br>10) ಯಾವುದೇ ಅನಧಿಕೃತ ಕಸಾಯಿಖಾನೆಗಳು ಕಾರ್ಯನಿರ್ವಹಿಸದಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿದೆ.<br>11) ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪರವಾನಗಿ ಇಲ್ಲದೆ ಕಸಾಯಿಖಾನೆ ನಡೆಸುತ್ತಿರುವ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಬೀಟ್‌ಗಳಲ್ಲಿರುವ ಕಸಾಯಿಖಾನೆಗಳ ಬಗ್ಗೆ ನಿಗಾ ಇರಿಸುವಂತೆ ಬೀಟ್ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ. |

**ಸಂಖ್ಯೆ:ಪಸಂಮೀ 166 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂಧ-1



| ಕ್ರ. ಸಂ | ಜಿಲ್ಲೆಗಳು | ಕ್ರ. ಸಂ | ಸರ್ಕಾರಿ ಗೋಶಾಲೆ ವಿವರ | ಷರಾ |
|---|---|---|---|---|
| 1 | 2 | 3 | 4 | 5 |
| 1 | ಚಿಕ್ಕಮಗಳೂರು | 1 | ಕಡೂರು ತಾಲ್ಲೂಕು, ಎಮ್ಮೆದೊಡ್ಡಿ | ಕಾರ್ಯನಿರ್ವಹಿಸುತ್ತಿದೆ |
| 2 | ವಿಜಯಪುರ | 2 | ವಿಜಯಪುರ ತಾಲುಕು ಬುರಣಾಪೂರ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 3 | ಹಾಸನ | 3 | ಅರಸೀಕೆರೆ ತಾಲುಕು ಹಬ್ಬನಗಟ್ಟ ಕಾವಲು, ಬೋರನಕೊಪ್ಪಲು | ಕಾರ್ಯನಿರ್ವಹಿಸುತ್ತಿದೆ |
| | | 4 | ಸಿದ್ದಾಪುರ ಗ್ರಾಮ, ಪುಷ್ಪಗಿರಿ, ಹಳೇಬಿಡು ಹೋಬಳಿ, ಬೇಲೂರು ತಾಲ್ಲೂಕು | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ |
| | | 5 | ರಾಯಸಮುದ್ರ, ಅಮೃತ್‌ಮಹಲ್ ತಳಿಸಂವರ್ಧನ ಕಾವಲ್, ಚನ್ನರಾಯ ಪಟ್ಟಣ, | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ |
| 4 | ಬೆಂಗಳೂರು ಗ್ರಾಮಾಂತರ | 6 | ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೇಹಳ್ಳಿ | ಕಾರ್ಯನಿರ್ವಹಿಸುತ್ತಿದೆ |
| | | 7 | ಕಲ್ಲಹಳ್ಳಿ, ಹೊಸಕೋಟೆ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| 5 | ತುಮಕೂರು | 8 | ಶಿರಾ ತಾಲ್ಲೂಕಿನಲ್ಲಿ ಹುಲಕುಂಟೆ ಹೋಬಳಿ, ಚಿಕ್ಕಬಾಣಗೇರೆ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 6 | ಕೋಲಾರ | 9 | ವೆಂಕಟಾಪುರ ಮಜುರೆ ಗುಟ್ಟಹಳ್ಳಿ ಗ್ರಾಮದ ಬಂಗಾರ ತಿರುಪತಿ ದೇವಸ್ಥಾನದ ಹತ್ತಿರ, | ಕಾರ್ಯನಿರ್ವಹಿಸುತ್ತಿದೆ |
| 7 | ಉತ್ತರ ಕನ್ನಡ | 10 | ದುಸಗಿ ಗ್ರಾಮ, ಹಳಿಯಾಳ ತಾಲ್ಲೂಕು ಸರ್ಕಾರಿ ಗಾಯರಾಣ | ಕಾರ್ಯನಿರ್ವಹಿಸುತ್ತಿದೆ |
| | | 11 | ಕನಸಗಿರಿ ಗ್ರಾಮ, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. | ಕಾಮಗಾರಿ ಪ್ರಗತಿಯಲ್ಲಿದೆ |
| | | 12 | ಅಜ್ಜಿಬಾಳ ಗ್ರಾಮ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. | ಕಾಮಗಾರಿ ಪ್ರಗತಿಯಲ್ಲಿದೆ |
| 8 | ಕೊಡಗು | 13 | ಮಡಿಕೇರಿ ತಾಲ್ಲೂಕು, ನಿಡುಗಣೆ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 9 | ಉಡುಪಿ | 14 | ಹೆಬ್ರಿ ತಾಲ್ಲೂಕು, ಕೆರೆಬೆಟ್ಟು ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| | | 15 | ಕಾಪು ತಾಲ್ಲೂಕು, ಎಲ್ಲೂರು ಗ್ರಾಮ | ಕಾಮಗಾರಿ ಪ್ರಗತಿಯಲ್ಲಿದೆ |
| 10 | ದಕ್ಷಿಣ ಕನ್ನಡ | 16 | ಕಡಬ ತಾಲುಕು, ರಾಮಕುಂಜ ಗ್ರಾಮ, ಜಾನುವಾರು ಸಂವರ್ದನಾ ಮತ್ತು ತರಬೇತಿ ಕೇಂದ್ರ, ಕೊಯ್ಲ ಕ್ಷೇತ್ರ | ಕಾರ್ಯನಿರ್ವಹಿಸುತ್ತಿದೆ |
| | | 17 | ಮಿತ್ತೂರು ಗ್ರಾಮ, ಸುಳ್ಯ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| 11 | ಮೈಸೂರು | 18 | ವರುಣ ಹೋಬಳಿ, ಆಯರ ಹಳ್ಳಿ, | ಕಾರ್ಯನಿರ್ವಹಿಸುತ್ತಿದೆ |
| 12 | ಹಾವೇರಿ | 19 | ಗುತ್ತಲ ಕುರಿ ಸಂವರ್ದನಾ ಕೇಂದ್ರ | ಕಾರ್ಯನಿರ್ವಹಿಸುತ್ತಿದೆ |
| 13 | ಚಾಮರಾಜನಗರ | 20 | ಬರಗಿ ಗ್ರಾಮ ಗುಂಡ್ಲುಪೇಟೆ ತಾಲ್ಲೂಕು | ಕಾರ್ಯನಿರ್ವಹಿಸುತ್ತಿದೆ |
| 14 | ಬೆಳಗಾವಿ | 21 | ಹುಕ್ಕೇರಿ ತಾಲ್ಲೂಕು ಬೆಳವಿ ಗ್ರಾಮ, | ಕಾರ್ಯನಿರ್ವಹಿಸುತ್ತಿದೆ |
| 15 | ಬೆಂಗಳೂರು ನಗರ | 22 | ಆನೇಕಲ್ ತಾ: ಜಿಗಣಿ ಹೋಬಳಿ, ಬುಕ್ಕಸಾಗರ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| | | 23 | ಹೆಸರಘಟ್ಟ ಹತ್ತಿರ, ಕೋಡಿಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| 16 | ಶಿವಮೊಗ್ಗ | 24 | ಹೊಸನಗರ ತಾಲುಕು, ಗೊರಗೋಡು ಗ್ರಾಮ, ಹುಂಚಾ ಹೋಬಳಿ | ಕಾರ್ಯನಿರ್ವಹಿಸುತ್ತಿದೆ |
| 17 | ಚಿತ್ರದುರ್ಗ | 25 | ಕುರಡಿಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಳ್ಳಕೆರೆ ತಾಲ್ಲೂಕು | ಕಾರ್ಯನಿರ್ವಹಿಸುತ್ತಿದೆ |
| 18 | ಕೊಪ್ಪಳ | 26 | ಯಲಬುರ್ಗಾ ತಾಲುಕು, ಭೇವೂರ ಗ್ರಾಮ, ಗಾಯರಾಣ | ಕಾರ್ಯನಿರ್ವಹಿಸುತ್ತಿದೆ |
| 19 | ದಾವಣಗೆರೆ | 27 | ಹೊಸಹಳ್ಳಿ ಗ್ರಾಮ, ಆನೆಗೋಡು ಹೋಬಳಿ | ಕಾರ್ಯನಿರ್ವಹಿಸುತ್ತಿದೆ |
| 20 | ಬೀದರ | 28 | ಔರಾದ ತಾಲ್ಲೂಕು ಹೆಡ್ಗಾಪುರ ಗ್ರಾಮದ Livestock breeding farm | ಕಾರ್ಯನಿರ್ವಹಿಸುತ್ತಿದೆ |
| 21 | ರಾಯಚೂರು | 29 | ರಾಯಚೂರು ತಾಲ್ಲೂಕು ಯರಗೇರಾ ಹೋಬಳಿ, ಜಂಬಲದಿನ್ನಿ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |

| 1 | 2 | 3 | 4 | 5 |
|---|---|---|---|---|
| 22 | ಧಾರವಾಡ | 30 | ಮದನಬಾವಿ ಗ್ರಾಮ, ತೇಗೂರು ಹತ್ತಿರ, ಗರಗ ಹೋಬಳಿ ಧಾರವಾಡ ತಾಲ್ಲೂಕು | ಕಾರ್ಯನಿರ್ವಹಿಸುತ್ತಿದೆ |
| | | 31 | ವರಸಾಪುರ ಗ್ರಾಮ, ಛಬ್ಬಿ ಹೋಬಳಿ, ಹುಬ್ಬಳ್ಳಿ ತಾಲ್ಲೂಕು | ಕಾಮಗಾರಿ ಪ್ರಗತಿಯಲ್ಲಿದೆ |
| 23 | ಗದಗ | 32 | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಆವರಣ, ನಾಗವಿ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 24 | ಕಲಬುರ್ಗಿ | 33 | ಕಲಬುರ್ಗಿ ತಾಲುಕು ಮಿಣಜಿಗಿ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 25 | ಬಾಗಲಕೋಟೆ | 34 | ಬೀಳಗಿ ತಾಲೂಕಿನ ಬೂದಿಹಾಳ ಎಸ್.ಹೆಚ್ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| | | 35 | ಕೂಡಲಸಂಗಮ ಪ್ರಾಧಿಕಾರ, ಹೂನಗುಂದ ತಾಲ್ಲೂಕು | ಕಾಮಗಾರಿ ಪ್ರಗತಿಯಲ್ಲಿದೆ |
| 26 | ಚಿಕ್ಕಬಳ್ಳಾಪುರ | 36 | ನಾಗಿರೆಡ್ಡಿಹಳ್ಳಿ, ಭುಶಟ್ಟಹಳ್ಳಿ ಹೋಬಳಿ, ಶಿಡ್ಲಘಟ್ಟ ತಾ | ಕಾರ್ಯನಿರ್ವಹಿಸುತ್ತಿದೆ |
| 27 | ವಿಜಯನಗರ | 37 | ವಿಜಯ ನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲುಕು, ವರ್ಲಹಳ್ಳಿ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| 28 | ಮಂಡ್ಯ | 38 | ಮದ್ದೂರು ತಾಲ್ಲೂಕು,ಆತಗೂರು ಹೋಬಳಿ, ಹೂತಗೆರೆ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| | | 39 | ಕೆಲಗೆರೆ ಗ್ರಾಮ, ಅಮೃತ್ ಮಹಲ್ ಕಾವಲು, ನಾಗಮಂಗಲ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| | | 40 | ಹೆಬ್ಬಣಿ ಗ್ರಾಮ, ಬಿ.ಜಿಪುರ 2ನೇ ಹೋಬಳಿ, ಮಳವಳ್ಳಿ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| 29 | ರಾಮನಗರ | 41 | ವಂದಾರಗುಪ್ಪೆ ಗ್ರಾಮ, ಚನ್ನಪಟ್ಟಣ | ಕಾರ್ಯನಿರ್ವಹಿಸುತ್ತಿದೆ |
| | | 42 | ಕಾಮಸಾಗರ ಗ್ರಾಮ, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |
| 30 | ಯಾದಗಿರಿ | 43 | ಯಾದಗಿರಿ ತಾ: ರಾಚನ ಹಳ್ಳಿ ಗ್ರಾಮ | ಕಾರ್ಯನಿರ್ವಹಿಸುತ್ತಿದೆ |
| | | 44 | ಗುರಿಹಾಳ (ಜೆ), ಸುರಪೂರ ತಾಲ್ಲೂಕು, | ಕಾಮಗಾರಿ ಪ್ರಗತಿಯಲ್ಲಿದೆ |

ನಿರ್ದೇಶಕರು.

ಅನುಬಂಧ -2 (19)


ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website:www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.


ಸಂಖ್ಯೆ: ಪೌನಿ/82/ಫವನಿ/2013-14

ದಿನಾಂಕ: 27/03-2015

ಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
2. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಜಿಲ್ಲಾ ಯೋಜನಾ ನಿರ್ದೇಶಕರುಗಳ ಮೂಲಕ

ಮಾನ್ಯರೇ,

ವಿಷಯ : ಕಸಾಯಿಖಾನೆ ನಿರ್ಮಾಣ ಹಾಗು ನಿರ್ವಹಣೆ ವೇಳೆಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು

ಉಲ್ಲೇಖ : 1) ಈ ಕಛೇರಿಯ ಸುತ್ತೋಲೆ ಸಂಖ್ಯೆ ಪೌನಿ/ನಿನ/ಕಸಾಯಿಖಾನೆ/ಸಿ ಆರ್ 06/05-06, ದಿನಾಂಕ 28-2-2013

2) ಈ ಕಛೇರಿಯ ಪತ್ರದ ಸಂಖ್ಯೆ 23-8-2013

3) Food saftey & Standards (Food Products Standards and Food Activités) Regulations, 2011

4) Indian Standards No. IS 14904 :2007

5) Prevention of Cruelty to Animals (Slaughter House) Rules, 2001

*****

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ Prevention of Cruelty to Animals (Slaughter House) Rules, 2001 ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಕಡ್ಡಾಯ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಅಗತ್ಯ ನಿರ್ದೇಶನಗಳನ್ನು ಉಲ್ಲೇಖ (1) ಮತ್ತು (2) ರ ಪತ್ರಗಳಲ್ಲಿ ನೀಡಲಾಗಿದ್ದು, ಇದರ ಕುರಿತಾಗಿ ಮತ್ತೊಮ್ಮೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ದಿನಾಂಕ 16-3-2015 ರ ರಾಜ್ಯ ಮಟ್ಟದ ಕಸಾಯಿಖಾನೆಗಳ ನಿರ್ವಹಣಾ ಸಮಿತಿ ಸಭೆಯಲ್ಲಿ ಸೂಚಿಸಿರುವ ಮೇರೆಗೆ ಮತ್ತೊಮ್ಮೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ಪ್ರತಿ ದಿನ 10 ಅಥವಾ 10ಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರಾಣಿಗಳ ವಧೆ ನಡೆಯುವ ಸ್ಥಳವನ್ನು ಕಸಾಯಿಖಾನೆ ಎಂದು ಕರೆಯಲಾಗುವುದು, ಅಂತಹ ಕಸಾಯಿಖಾನೆಗಳು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅಧಿಕೃತ ಪರವಾನಿಗೆ ಪಡೆದು ನಿರ್ವಹಿಸಬೇಕಿರುತ್ತದೆ (source : section 365 of THE KARNATAKA MUNICIPAL CORPORATIONS ACT, 1976 & 243,244 & 245 of THE KARNATAKA MUNICIPALITIES ACT, 1964)
2. ಯಾವುದೇ ವ್ಯಕ್ತಿ, ಯಾವುದೇ ಕಾರಣಕ್ಕೂ ಪುರಸಭಾ ವ್ಯಾಪ್ತಿಯಲ್ಲಿನ ನಿಗಧಿತ ಅಧಿಕೃತ ಪರವಾನಿಗೆ ಪಡೆದಿರುವ ಕಸಾಯಿಖಾನೆಗಳನ್ನು ಹೊರತು ಪಡಿಸಿ ಬೇರೆ ಸ್ಥಳಗಳಲ್ಲಿ ವಧೆ ಮಾಡುವಂತಿಲ್ಲ.
3. ಯಾವುದೇ ಕಾರಣಕ್ಕೂ, ಗರ್ಭಧರಿಸಿರುವ ಪ್ರಾಣಿಗಳನ್ನು , 3 ತಿಂಗಳಿಗಿಂತ ಕಡಿಮೆ ವಯಸ್ಸಿನ ಚಿಕ್ಕ ಮರಿಗಳನ್ನು ಹೊಂದಿರುವ ಪ್ರಾಣಿಗಳನ್ನು , 3 ತಿಂಗಳ ವಯಸ್ಸಿನ ಪ್ರಾಣಿಗಳನ್ನು ಮತ್ತು ಪಶು ವೈದ್ಯಾಧಿಕಾರಿಗಳು ವಧೆಗೆ ಸೂಕ್ತವಿರುವುದಿಲ್ಲವೆಂದು ಪ್ರಮಾಣೀಕರಿಸಿರುವ ಪ್ರಾಣಿಗಳನ್ನು ವಧೆ ಮಾಡಬಾರದು.

4. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ಥಳೀಯ ಸಂಸ್ಥೆಯಲ್ಲಿನ ಮಾಂಸದ ಮೇಲೆ ಅವಲಂಬಿತರಾಗಿರುವ ಜನಸಂಖ್ಯೆಯನ್ನಾಧರಿಸಿ ಕಸಾಯಿಖಾನೆಯ ಸಾಮರ್ಥ್ಯವನ್ನು ನಿಗಧಿಗೊಳಿಸಬೇಕು.
5. ಕಸಾಯಿಖಾನೆಗಳಿಗೆ ಸಾಗಿಸಲಾಗುವ ಪ್ರಾಣಿಗಳಿಗೆ ಸಂಬಂಧಿಸಿದಂತೆ ಇರುವ code of practice for transportation of live stock as per Indian Standards – 14904 :2007 ರ ಹಾಗು Transport of Animals Rules 1978, & Transport of Animals (Amendement) Rules 2001 ಹಾಗು ಇನ್ನಿತರೆ ಅನ್ವಯಿಸುವ ಕಾನೂನು ಹಾಗು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
6. ಕಸಾಯಿಖಾನೆಗಳಲ್ಲಿ ಪ್ರಾಣಿಗಳು ಪಶು ತಪಾಸಣೆ ನಡೆಸಲು ಅಗತ್ಯವಿರುವಷ್ಟು ಸ್ವಾಗತ ಪ್ರದೇಶವಿರಬೇಕು, ಪಶು ವೈದ್ಯಾಧಿಕಾರಿಗಳು ಪ್ರತಿ ಗಂಟೆಗೆ ಗರಿಷ್ಟ 12 ಪ್ರಾಣಿಗಳಂತೆ, ದಿನ ಒಂದಕ್ಕೆ 96 ಸಂಖ್ಯೆ ಮೀರದಂತೆ ಪ್ರಾಣಿಗಳನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು. ಕೇಂದ್ರ ಸರ್ಕಾರವು ನಿಗಧಿಗೊಳಿಸಿರುವ ಮಾದರಿಯಲ್ಲಿ ಫಿಟ್ನೆಸ್ ಸರ್ಟಿಫಿಕೇಟ್ ನ್ನು ನೀಡಬೇಕು. ಪ್ರಾಣಿಗಳ ಸ್ವೀಕೃತಿ ಪ್ರದೇಶಗಳಲ್ಲಿ ಪ್ರಾಣಿಗಳನ್ನು ವಾಹನಗಳಿಂದ ಇಳಿಸಲು ಹಾಗು ಪ್ರಾಣಿಗಳಿಗೆ ನೀರು ಮತ್ತು ಮೇವಿನ ವ್ಯವಸ್ಥೆ ಒದಗಿಸಬೇಕು.
7. ವಧೆಗೊಳ್ಳಲ್ಪಡುವ ಪ್ರಾಣಿಗಳ ವರ್ಗಗಳ ಆಧಾರದ ಮೇಲೆ, ಅವಶ್ಯ ಕೊಠಡಿಗಳನ್ನು ಸ್ಥಾಪಿಸಬೇಕು ಹಾಗು ಸದರ ಕೊಠಡಿಗಳಲ್ಲಿ ನೀರು ಮತ್ತು ಮೇವಿನ ವ್ಯವಸ್ಥೆ ಒದಗಿಸಬೇಕು.
8. ಅಂಟುವ್ಯಾಧಿ ಉಳ್ಳ, ಸಾಂಕ್ರಾಮಿಕ ರೋಗಗಳುಳ್ಳ ಮತ್ತು ಅಂಕೆಯಲ್ಲಿದ ಪ್ರಾಣಿಗಳೆಂದು ಸಂದೇಹಿಸಲ್ಪಟ್ಟ ಪ್ರಾಣಿಗಳನ್ನು ಇತರೆ ಪ್ರಾಣಿಗಳಿಂದ ಪ್ರತ್ಯೇಕಿಸುವ ಸಲುವಾಗಿ ಪ್ರತ್ಯೇಕ ಆವರಣಗಳಲ್ಲಿ ಕೂಡಿಡಲು ಹಾಗು ಸದರಿ ಪ್ರಾಣಿಗಳಿಗೆ ನೀರು ಮತ್ತು ಮೇವಿನ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.
9. ಕಸಾಯಿಖಾನೆಗಳಲ್ಲಿ ಪ್ರಾಣಿಗಳ ವಿಶ್ರಾಂತಿ ಜಾಗಗಳಿಗೆ ಅಗತ್ಯ ಮೇಲ್ಹಾವಣಿಯನ್ನು ಒದಗಿಸಬೇಕು.
10. ಪ್ರಾಣಿಗಳ ಗೊರಸುಗಳಿಂದ ನೆಲಕ್ಕೆ ಉಂಟಾಗಬಹುದಾದಂತಹ ನಷ್ಟವನ್ನು ತಪ್ಪಿಸುವ ಸಲುವಾಗಿ Ante-mortem ಹಾಗು ಪೆನ್‌ಗಳ ನೆಲಕ್ಕೆ ಕಾಂಕ್ರೀಟ್ ಅಥವಾ ಜಾರದಿರುವ ಮೇಲ್ಮೈಯುಳ್ಳ (ಹೇರಿಂಗ್ ಬೋನ್ ರೀತಿಯ) ಹಾಸನ್ನು ಸೂಕ್ತ ಒಳಚರಂಡಿ ಸಂಪರ್ಕದೊಂದಿಗೆ ಅಭಿವೃದ್ಧಿಪಡಿಸಬೇಕು ಹಾಗು ಪ್ರವೇಶದ್ವಾರ ಹೊರತುಪಡಿಸಿ ಜಾನುವಾರುಗಳ ಪೆನ್‌ಗಳ ನೆಲಕ್ಕೆ 150 ರಿಂದ 300 ಮಿಮಿ ಎತ್ತರದ ದಿಂಡುಗಳನ್ನು ನಿರ್ಮಿಸಬೇಕು ಹಾಗು ಅಂತಹ ಪೆನ್ ಗಳಿಗೆ ಮೇಲ್ಛಾವಣಿ ಇರಬೇಕು.
11. ಪಶು ತಪಾಸಣೆ ಆದ ನಂತರ ಪ್ರತಿ ಪ್ರಾಣಿಯು ವಧೆಗೆ ಮುನ್ನ ತಂಗುದೊಡ್ಡಿ (Lairages) ಗಳಲ್ಲಿ 24 ಗಂಟೆಗಳ ಕಾಲ ವಿಶ್ರಾಂತಿ ಪಡೆಯಬೇಕು, ತಂಗುದೊಡ್ಡಿಯು ಸಾಕಷ್ಟು ದೊಡ್ಡದಿರಬೇಕು, ತಂಗುದೊಡ್ಡಿಯ ಸ್ಥಳವನ್ನು ನಿರ್ಧರಿಸುವಾಗ Prevention of Cruelty to Animals (Slaughter House) Rules, 2001 ರಲ್ಲಿ ದೊಡ್ಡ ಮತ್ತು ಚಿಕ್ಕ ಪ್ರಾಣಿಗಳಿಗೆ ನಿಗಧಿಗೊಳಿಸಿರುವ ಸ್ಥಳವನ್ನು ಆಧರಿಸಿರಬೇಕು ಹಾಗು ನಿಯಮಾವಳಿಗಳಲ್ಲಿ ತಂಗುದೊಡ್ಡಿಗೆ ಸಂಬಂಧಿಸಿದಂತೆ ಇರುವ ಎಲ್ಲಾ ಮಾನದಂಡಗಳ ಅನುಸಾರ ಇರಬೇಕು.
12. ಕಸಾಯಿಖಾನೆಗಳಲ್ಲಿ ಒಂದು ಪ್ರಾಣಿಯ ಸಮ್ಮುಖದಲ್ಲಿ ಮತ್ತೊಂದು ಪ್ರಾಣಿಯನ್ನು ವಧೆ ಮಾಡಬಾರದು, ಪ್ರಾಣಿಗಳಿಗೆ ಯಾವುದೇ ನಿರ್ದಿಷ್ಟ ಖಾಯಿಲೆ ಅಥವಾ ಬೇನೆಯನ್ನು ಗುಣಪಡಿಸುವುದಕ್ಕೆ ಹೊರತುಪಡಿಸಿ ಇನ್ನಿತರೆಯಾಗಿ ರಾಸಾಯನಿಕ ಅಥವಾ ಇನ್ನಿತರೆ ಪದಾರ್ಥಗಳನ್ನು ನೀಡುವಂತಿಲ್ಲ.
13. ಕಸಾಯಿಖಾನೆಗಳಲ್ಲಿ ವಧೆಗೆ ಮೊದಲು ಪ್ರಾಣಿಗಳನ್ನು ಮೂರ್ಛೆಗೊಳಿಸುವ ಸಲುವಾಗಿ stunning area, ವಧೆಯ ನಂತರ ಅವಶ್ಯವಿರುವ ಬ್ಲೀಡಿಂಗ್ ಹಾಗು ಡ್ರೆಸ್ಸಿಂಗ್‌ಗಾಗಿ ಪ್ರತ್ಯೇಕ ಸ್ಥಳಗಳನ್ನು ನಿಗಧಿಗೊಳಿಸಬೇಕು. ನಿಯಮಾವಳಿಗಳಲ್ಲಿ ಇವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ರೂಪಿಸಿರುವ ಸೂಚನೆಗಳನ್ನು ಪಾಲಿಸಬೇಕು.
14. ಕಸಾಯಿಖಾನೆಗಳಲ್ಲಿ ಮಧ್ಯಂತರವಾಗಿ ಹಾಗು ದೈನಂದಿನ ಚಟುವಟಿಕೆಗಳ ನಂತರ ನೆಲ ಹಾಗು ಗೋಡೆಗಳನ್ನು ತೊಳೆಯಲು ಅಗತ್ಯ ನೀರಿನ ಸೌಲಭ್ಯ ಒದಗಿಸಬೇಕು ಹಾಗು ಪ್ರಾಣಿಗಳ ವಧೆ ಮಾಡುವವರಿಗೆ ಕೈ –ಕಾಲುಗಳನ್ನು ಸ್ವಚ್ಛಗೊಳಿಸಲು ವಾಷ್ ಬೇಸಿನ್ , ನೈಫ್ ಸ್ಯಾನಿಟೈಸರ್‌ಗಳನ್ನು ಒದಗಿಸಬೇಕು.
15. ಕಸಾಯಿಖಾನೆಗಳಲ್ಲಿ 18 ವರ್ಷಗಳಿಗಂತ ಮೇಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಕೆಲಸಕ್ಕೆ ನೇಮಿಸಿಕೊಳ್ಳಬೇಕು
16. ಅಂಟು ಜಾಡ್ಯ ಅಥವಾ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಕಸಾಯಿಖಾನೆಗಳಲ್ಲಿ ಕೆಲಸಕ್ಕೆ ಬಳಸಬಾರದು.

(17)

17. ಕಸಾಯಿಖಾನೆಗಳಲ್ಲಿನ ಸ್ಥಿತಿ ಗತಿಯನ್ನು ಪರಿಶೀಲಿಸಲು ಭಾರತ ಸರ್ಕಾರದ ದಿ ಅನಿಮಲ್ ವೆಲ್ಫೇರ್ ಬೋರ್ಡ್ ಅಥವಾ ಪ್ರಾಣಿ ದಯಾ ಸಂಘದವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ವ್ಯಕ್ತಿಯು ಯಾವುದೇ ಕಸಾಯಿಖಾನೆಯನ್ನು ಮಾಲಿಕರ ಅಥವಾ ಕಸಾಯಿಖಾನೆ ಉಸ್ತುವಾರಿವಹಿಸಿರುವ ವ್ಯಕ್ತಿಯ ಪೂರ್ವಾನುಮತಿ ಇಲ್ಲದೇ ಇದ್ದರೂ ಸಹಿತ ಕಸಾಯಿಖಾನೆಗಳನ್ನು ಕಛೇರಿ ಅವಧಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ. ಪರಿಶೀಲನಾವರದಿಯನ್ನು ದಿ ಅನಿಮಲ್ ವೆಲ್ಫೇರ್ ಬೋರ್ಡ್ ಹಾಗು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಿ, ಶಿಸ್ತು ಕ್ರಮವನ್ನು ಶಿಫಾರಸ್ಸು ಮಾಡಬಹುದು.
18. ಇದನ್ನು ಹೊರತುಪಡಿಸಿ, Prevention of Cruelty to Animals (Slaughter House) Rules, 2001 ರಲ್ಲಿನ ಮಾರ್ಗಸೂಚಿಗಳಲ್ಲಿ ಕಸಾಯಿಖಾನೆಗಳ ವಿನ್ಯಾಸ, ನಿರ್ವಹಣೆ ಮತ್ತು ದೈನಂದಿನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ನೀಡಿರುವ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸಲು ಕ್ರಮ ಕೈಗೊಳ್ಳಬೇಕಿರುತ್ತದೆ.
19. ಕಸಾಯಿಖಾನೆಗಳು Food & Saftey standards (licensing and Registration of Food Business) Regulations, 2011 ರಂತೆ ಪರವಾನಿಗೆ ಪಡೆಯಬೇಕು.
20. ಕಸಾಯಿಖಾನೆ ನಿರ್ಮಾಣಕ್ಕಾ ಸೂಕ್ತ ಜಾಗವನ್ನು ಗುರುತಿಸಿದ ನಂತರ, ಸದರಿ ಜಾಗದಲ್ಲಿ ಕಸಾಯಿಖಾನೆ ನಿರ್ಮಿಸಿಲು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಇತರೆ ಶಾಸನಬದ್ಧ ಅನುಮೋದನೆಗಳನ್ನು ಪಡೆಯುವ್ರದು ಕಡ್ಡಾಯವಾಗಿರುತ್ತದೆ. ಹಾಗು ಕಸಾಯಿಖಾನೆಯನ್ನು ಉದ್ದಿಮೆ ಎಂದು ಪರಿಗಣಿಸಿ ಭೂ ಬಳಕೆ ಮಾದರಿ (Land use pattern) ಯನ್ನು ಬದಲಾಯಿಸಿ ನೀಡುವಂತೆ District Town Planning ನ್ನು ಕೋರಿ ಪಡೆಯಬೇಕಿರುತ್ತದೆ.
21. ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ನಗರಸ್ಥಳೀಯ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಕಸಾಯಿಖಾನೆಗಳನ್ನು ಗುರುತಿಸಿ, ಪಟ್ಟಿ ಮಾಡಿ ಸದರಿ ಮಾಹಿತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
22. ಹಳೆಯ ಕಸಾಯಿಖಾನೆಗಳ ಆಧುನೀಕರಣ ಅಥವಾ ಹಳೆಯ ಕಸಾಯಿಖಾನೆಗಳು ಸಾರ್ವಜನಿಕ ವಾಸಸ್ಥಳಕ್ಕೆ ಹತ್ತಿರವಿದ್ದಲ್ಲಿ, ಅವುಗಳನ್ನು ಸ್ಥಳಾಂತರಗೊಳಿಸಲು ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು (ಆಧುನಿಕ ಕಸಾಯಿಖಾನೆ ನಿರ್ಮಾಣಕ್ಕೆ ಸ್ಥಳವನ್ನು ಆಯ್ಕೆ ಮಾಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ).
23. ಕಸಾಯಿಖಾನೆಗಳ ಕಾರ್ಯವೈಖರಿಯನ್ನು ಪರಿಶೀಲಿಸಲು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಕಸಾಯಿಖಾನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ನಿಯಮಗಳ ಅನುಷ್ಠಾನಕ್ಕೆ ಬೇಕಿರುವ ಅಗತ್ಯ ನಿರ್ದೇಶನಗಳನ್ನು ನೀಡಬೇಕು.
24. ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ನಗರಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿರುತ್ತಿರುವ ಅನಧಿಕೃತ ಕಸಾಯಿಖಾನೆಗಳು, ಕಾನೂನಿಗೆ ವಿರುದ್ಧವಾಗಿ ಪ್ರಾಣಿಗಳ ವಧೆ ಮಾಡಲಾಗುತ್ತಿರುವ ಸ್ಥಳಗಳು, ಎಷ್ಟೇ ಚಿಕ್ಕ ಪ್ರಮಾಣದಾಗಿದ್ದರೂ ಅವುಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಬೇಕು.
25. ಕಸಾಯಿಖಾನೆಗಳಲ್ಲಿನ ವಧಾಗಾರರಿಗೆ (butchers) ಅಗತ್ಯ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕು.

ತಮ್ಮ ವಿಶ್ವಾಸಿ

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ರವರ ಮಾಹಿತಿಗಾಗಿ
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ರವರ ಮಾಹಿತಿಗಾಗಿ